## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.

## ಸಿ.ಸಿ.ನಂ.422/2018

| | | | |
|---|---|---|---|
| ಸಾಕ್ಷಿದಾರರ ಹೆಸರು | ರೇಣವ್ವ ಶಿರಗುಪ್ಪಿ | ಸಿಡಬ್ಲ್ಯೂ | 8 |
| ಗಂಡನ ಹೆಸರು | ಮುತ್ತಪ್ಪ | ಪಿಡಬ್ಲ್ಯೂ | 5 |
| ವಯಸ್ಸು | 60 ವರ್ಷ | | |
| ಉದ್ಯೋಗ | ಕೂಲಿ | | |
| ವಾಸಸ್ಥಳ | ಹಾವೇರಿ | | |

**ದಿಃ 06.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1). ಚಾ.ಸಾ-11 ಮತ್ತು ಚಾ.ಸಾ-28 ಮತ್ತು ಆರೋಪಿಯ ಪರಿಚಯ ಇರುವದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇರುವದಿಲ್ಲ. ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆ ಕೊಟ್ಟಿರುವದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಹಿ.ಸ.ಸ.ಅಭಿಯೋಜಕರಿಂದ.**

2) 1 ನೇ ಆರೋಪಿಯು ಹಾವೇರಿ ಬಸವೇಶ್ವರ ನಗರದಲ್ಲಿ ಸಿದ್ದೇಶ್ವರ ಅಸೋಷಿಯೇಷನ ನ್ಯಾಯಬೆಲೆ ಅಂಗಡಿಯ ಲೈಸೆನ್ಸದಾರನಾಗಿದ್ದು ಸದರಿ ಅಂಗಡಿಯಲ್ಲಿ ನನಗೆ ಸರ್ಕಾರದಿಂದ ಪಡಿತರ ಕಾರ್ಡನ್ನು ವಿತರಿಸಿದ್ದು, 2016 ನೇ ವರ್ಷದಲ್ಲಿ ಅಗಸ್ಟ ತಿಂಗಳಿನಿಂದ ಸರ್ಕಾರವು ನನಗೆ ವಿತರಿಸಲು ಕೂಪನ್ ವ್ಯವಸ್ಥೆಯನ್ನು ಮಾಡಿದ್ದು, ಸದರಿ ಕೂಪನನ್ನು ನೀಡಲು 2 ನೇ ಆರೋಪಿಯು ಸರ್ಕಾರದಿಂದ ಮಾನ್ಯತೆ ಪಡೆದುಕೊಂಡಿದ್ದು, 2 ನೇ ಆರೋಪಿಯು ನಮ್ಮ

ಸಿ.ಡಬ್ಲೂ-8, ಪಿ.ಡಬ್ಲೂ-5

ಕುಟುಂಬಕ್ಕೆ ಸೇರದೇ ಇರುವ ಆಧಾರಕಾರ್ಡನ್ನು ಪಡೆದುಕೊಂಡು ಆರೋಪಿಗಳು ನಮ್ಮ ಕುಟುಂಬಕ್ಕೆ ಬರಬೇಕಿದ್ದ ಅಗಸ್ಟ ತಿಂಗಳಿನಿಂದ ಅಕ್ಟೋಬರ ತಿಂಗಳ ರೇಷನನ್ನು ನನಗೆ ಕೊಡದೇ ನನಗೂ ಹಾಗೂ ಸರ್ಕಾರಕ್ಕೂ ವಂಚನೆ ಮತ್ತು ಮೋಸವನ್ನು ಮಾಡಿದ್ದಲ್ಲದೇ ಆರೋಪಿತರು ತಮ್ಮ ರೇಶನ ಅಂಗಡಿಯಿಂದ ರೂ.72,345/- ಗಳನ್ನು ನಷ್ಟ ಉಂಟು ಮಾಡಿರುತ್ತಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸರ್ಕಾರಕ್ಕೆ ವರದಿ ಬಂದಿದ್ದರ ಆಧಾರದ ಮೇಲೆ ಚಾ.ಸಾ-1ರವರು ಆರೋಪಿತರ ವಿರುದ್ಧ ದೂರನ್ನು ನೀಡಿರುತ್ತಾರೆ ಅಂದರೆ ಸರಿಯಲ್ಲ. 1 ನೇ ಆರೋಪಿಯ ಅಂಗಡಿಗೆ ಸಂಬಂಧಿಸಿದಂತೆ ಒಟ್ಟು 41 ಕೂಪನಗಳನ್ನು ಬೇರೆ ಬೇರೆ ರೇಷನ ಕಾರ್ಡುದಾರರಿಗೆ ಸಂಬಂಧಿಸಿದ್ದು ಅವುಗಳಿಗೆ ಸಂಬಂಧಿಸಿದಂತೆ 4 ಆಧಾರಕಾರ್ಡಗಳನ್ನು ಬಳಸಿರುತ್ತಾರೆ ಎನ್ನುವ ವಿಷಯ ನನಗೆ ಗೊತ್ತಿರುತ್ತದೆ ಅಂದರೆಸ ರಿಯಲ್ಲ.

3) ನಾನು 1ನೇ ಆರೋಪಿಯ ಅಂಗಡಿಯಿಂದ ರೇಷನ ಪಡೆದುಕೊಳ್ಳುತ್ತಿದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಬಗ್ಗೆ ದಿನಾಂಕಃ 13.12.2016 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿ.ಪಿ-5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರವಾಗಿಃ ಪಾಟೀ ಸವಾಲು ಇರುವದಿಲ್ಲ ಎಂದು ತಿಳಿಸಿರುತ್ತಾರೆ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.